ದಿನಾಂಕಃ 27.11.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ತೀರ್ಪು ಋಣಿದಾರರ ಪರ ಶ್ರೀ ಎಂ.ವಿ.ಜೆ. ವಕೀಲರಿಂದ:**

ದಾವ ಜಮೀನುಗಳು ನನ್ನ ತಂದೆಗೆ ಮಂಜೂರಾಗಿತ್ತು ಎಂದರೆ ಸರಿ. ದಾವ ಜಮೀನುಗಳ ಚೆಕ್ಕುಬಂದಿ ತೋರಿಸಲು ಅವುಗಳ ಮಂಜೂರಿ ನಕ್ಷೆಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ. ತೀರ್ಪು ಋಣಿದಾರರು ದಾವ ಜಮೀನುಗಳನ್ನು ಅತೀಕ್ರಮ ಪ್ರವೇಶ ಮಾಡಿ ತೊಂದರೆ ಕೊಡಲು ಪ್ರಯತ್ನಿಸುತ್ತಿದ್ದಾರೆ. ಸ.ನಂ.486 ಮತ್ತು ಸ.ನಂ.102 ರ ಪೂರ್ವ ದಿಕ್ಕಿನ ಕಡೆ ಬೇಲಿ ತೆಗೆಯಲು ತೀರ್ಪು ಋಣಿದಾರರು ಪ್ರಯತ್ನಿಸಿದ್ದರು. ಕೂವೆ ಮತ್ತು ಆದಿಹೋಣಿ ಗ್ರಾಮದ ಸ.ನಂ.21 ರಲ್ಲಿ ತೀರ್ಪು ಋಣಿದಾರರಿಗೆ ಜಮೀನು ಇದೆ. ಆ ರೀತಿ ಎಷ್ಟು ಎಕರೆ ಜಮೀನು ತೀರ್ಪು ಋಣಿದಾರರಿಗೆ ಇದೆ ಎಂದು ನನಗೆ ಗೊತ್ತಿಲ್ಲ. ತೀರ್ಪು ಋಣಿದಾರರಿಗೆ ಸ.ನಂ.21 ರಲ್ಲಿ ಇರುವ ಜಮೀನಿನ ಪೂರ್ವಕ್ಕೆ ಅರಣ್ಯ ಪ್ರದೇಶ, ಪಶ್ಚಿಮಕ್ಕೆ ನನಗೆ ಸೇರಿದ ಸ.ನಂ.102 ರ ಜಮೀನು, ಉತ್ತರಕ್ಕೆ ರಸ್ತೆ ಇದೆ. ಆ ರಸ್ತೆ ಕೊಟ್ಟೆಗೆಹಾರ-ಬಾಳೇಹೊನ್ನೂರು ರಸ್ತೆಯಿಂದ ಸುಳಿಮನೆಗೆ ತಲುಪುತ್ತದೆ. ತೀರ್ಪು ಋಣಿದಾರರ ಸ.ನಂ.21 ರ ಜಮೀನಿನ ದಕ್ಷಿಣಕ್ಕೆ ಅವರದ್ದೇ ಆದ ಜಮೀನು ಇದೆ. ಸುಮಾರು 15-20 ವರ್ಷಗಳಿಂದ ತೀರ್ಪು ಋಣಿದಾರರು ಸದರಿ ಜಮೀನುಗಳ ಸ್ವಾಧೀನದಲ್ಲಿ ಇದ್ದಾರೆ.

ತೀರ್ಪು ಋಣಿದಾರರು ತನ್ನ ಜಮೀನುಗಳಿಗೆ ಬೇಲಿ ಮಾಡಿಕೊಂಡಿದ್ದಾರೆ. ಆದಿಹೋಣಿ ಮತ್ತು ಕೂವೆ ಗ್ರಾಮದ ಸ.ನಂ.164 ರಲ್ಲಿ ತೀರ್ಪು ಋಣಿದಾರರಿಗೆ 3 ಎಕರೆ ಜಮೀನು ಇದೆ. ಆ ಜಮೀನಲ್ಲೂ ಸಹಾ ಅವರು ಸಮಾರು 15-20 ವರ್ಷಗಳಿಂದ ಕೃಷಿ ಮಾಡುತ್ತಿದ್ದಾರೆ. ಸದರಿ ಜಮೀನಿಗೆ ಬೇಲಿ ಮಾಡಿದ್ದಾರೆ ಎಂದರೆ ಸರಿ. ದಾವ ಜಮೀನುಗಳಿಗೆ ನಾನು ತಂತಿ ಬೇಲಿ ಅಳವಡಿಸಿದ್ದೇನೆ. ಆ ಬೇಲಿ ಜಮೀನು ಮಂಜೂರಾದ ಕಾಲದಿಂದಲೂ ಇದ್ದು, ಅದನ್ನು ಆಗಾಗ ರಿಪೇರಿ ಮಾಡುತ್ತೇವೆ ಎಂದರೆ ಸರಿ. ದಾವ ಜಮೀನುಗಳಿಗೆ ಇಂದಿಗೂ ಸಹಾ ಬೇಲಿ ಇದೆ ಎಂದರೆ ಸರಿ. ಆ ಬೇಲಿ ಸುಮಾರು 30 ವರ್ಷಗಳಿಂದಲೂ ಸಹಾ ಇದೆ. ದಾವ ಐಟಂ.ನಂ.1 ರ ಜಮೀನಿನ ಪಶ್ಚಿಮ ದಿಕ್ಕಿಗೆ ಇದ್ದ ಜಮೀನಿನ ಸ್ವಾಧೀನದಾರರಾದ ಅಣ್ಣೆಪೂಜಾರಿ ಈಗ ಜೀವಂತವಿಲ್ಲ. ಅವರು ಕಳೆದ 4 ವರ್ಷದ ಹಿಂದೆ ಮರಣ ಹೊಂದಿದ್ದಾರೆ. ಅಣ್ಣೆಪೂಜಾರಿ ರವರ ಪತ್ನಿ ಊರಿನಲ್ಲಿ ಇಲ್ಲ ಎಂದರೆ ಸರಿ. ಅಣ್ಣೆಪೂಜಾರಿ ರವರ ಒಬ್ಬ ಮಗ ಮೃತರಾಗಿದ್ದು ಮತ್ತೊಬ್ಬ ಮಗ ಎಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸ.ನಂ.164 ರಲ್ಲಿ ಅಣ್ಣೆಪೂಜಾರಿ ರವರು ಸ್ವಾಧೀನದಲ್ಲಿ ಇರಲಿಲ್ಲ, ಆದರೆ ಅವರು ಸ.ನಂ.21 ರಲ್ಲಿ ಸ್ವಾಧೀನದಲ್ಲಿ ಇದ್ದರು.

ಅಣ್ಣೆಪೂಜಾರಿ ರವರ ಸ್ವಾಧೀನದಲ್ಲಿ ಇದ್ದ ಜಮೀನನ್ನು ನನ್ನ ತಮ್ಮನಿಗೆ ಮಾರಾಟ ಮಾಡಿದ್ದು, ಆ ಜಮೀನಿನಲ್ಲಿ ನನ್ನ ತಮ್ಮ ಸ್ವಾಧೀನದಲ್ಲಿ ಇದ್ದಾರೆ. 6 ವರ್ಷದ ಹಿಂದೆ ಸದರಿ ಮಾರಾಟ ವ್ಯವಹಾರವಾಗಿದೆ. ಈ ವಿಚಾರವನ್ನು ಪ್ರಸ್ತುತ ಪ್ರಕರದಲ್ಲಿ ನಾನು ಹೇಳಿಕೊಂಡಿಲ್ಲ. ಅಣ್ಣೆಪೂಜಾರಿ ರವರು ಸ್ವಾಧೀನದಲ್ಲಿ ಇದ್ದ ಜಮೀನು ಸರ್ಕಾರಿ ಜಾಗ ಎಂದರೆ ಸರಿ. ಈ ಕಾರಣ ಅದನ್ನು ಮಾರಾಟ ಮಾಡಲಾಗುವುದಿಲ್ಲ ಎಂದರೆ ಸರಿ. ದಿ.15.10.2021 ರಿಂದ ದಾವ ಜಮೀನುಗಳನ್ನು ನಾನು ನೋಡಿಕೊಳ್ಳುತ್ತಿದ್ದೇನೆ. ದಾವ ಜಮೀನಿನ ಹದ್ದುಬಸ್ತಿಗಾಗಿ ನನ್ನ ತಂದೆ ಅರ್ಜಿ ಸಲ್ಲಿಸಿಕೊಂಡಿದ್ದರು ಎಂದರೆ ಸರಿ. ಈಗ ನೋಡುತ್ತಿರುವ ದಾಖಲೆ ಸದರಿ ಸರ್ವೇ ಸಂಬಂಧ ಮಹಜರ್ ಮತ್ತು ನಕ್ಷೆ ಎಂದರೆ

ಸರಿ. ಅವುಗಳನ್ನು ನಿಡಿ-1 ಮತ್ತು 2 ಎಂದು ಗುರುತಿಸಲಾಯಿತು. ಸದರಿ ಹದ್ದುಬಸ್ತು ಕಾರ್ಯಕ್ಕೆ ನಾನು ಸಹಾ ಹಾಜರಿದ್ದೆ. ನಿಡಿ-1 ಮತ್ತು 2 ರ ಅಸಲು ಪ್ರತಿ ನನ್ನ ಬಳಿ ಇದೆ ಎಂದರೆ ಸರಿ. ಸದರಿ ದಾಖಲೆಗಳಲ್ಲಿ ಇರುವ ವಿವರ ಸರಿ ಇದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಸರ್ವೇ ಕಾಲಕ್ಕೆ 20 ಗುಂಟೆ ಜಮೀನು ಕಡಿಮೆ ಇದೆ ಎಂದು ಅದರಲ್ಲಿ ಬರೆಯಲಾಗಿದೆ ಎಂದು ನುಡಿಯುತ್ತಾರೆ. ಸದರಿ 20 ಗುಂಟೆ ಜಮೀನನ್ನು ತೀರ್ಪು ಋಣಿದಾರರ ಗಂಡ ಒತ್ತುವರಿ ಮಾಡಿದ್ದಾರೆ. ಈ ಸಂಬಂಧವಾಗಿಯೇ ನಾನು ಪ್ರಸ್ತುತ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ. ದಿ.15.10.2021 ರಂದು ಸದರಿ ಜಮೀನು ಒತ್ತುವರಿಯಾಗಿದೆ. ಸದರಿ ವಿಚಾರವಾಗಿ ಪೋಲಿಸರಿಗೆ ದೂರು ಕೊಟ್ಟಿದ್ದೇನೆ.

ನಾನು ಕೊಟ್ಟಿದ್ದ ದೂರಿನ ಪ್ರಕಾರ ಪೋಲಿಸರು ಚಾರ್ಜ್ ಶೀಟ್ ಸಲ್ಲಿಸಿಲ್ಲ, ಆದರೆ NC ಮಾಡಿದ್ದಾರೆ. ದಿ.24.04.2024 ರಂದು NC ಹಿಂಬರಹ ಪಡೆದಿದ್ದೇನೆ. ಸದರಿ NC ಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ದಿ.24.04.2024 ರಂದು ಬಾಳೂರು ಪೋಲಿಸ್ ಠಾಣೆಯಿಂದ ನನಗೆ ಯಾವುದೇ NC ಹಿಂಬರಹ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಹದ್ದುಬಸ್ತು ಸರ್ವೇ ಕಾಲಕ್ಕೆ ಒತ್ತುವರಿ ದಾರರ ವಿವರ ನೀಡಲಾಗುತ್ತದೆ ಎಂದರೆ ಸರಿ. ದಾವ ಜಮೀನುಗಳ ಹದ್ದುಬಸ್ತು ಕಾಲಕ್ಕೆ ಯಾವುದೇ ಒತ್ತುವರಿಯಾಗಿಲ್ಲ ಎಂದು ವರದಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಇದ್ದರೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೀರ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಜಮೀನುಗಳ ಸಂಬಂಧ ತೀರ್ಪು ಋಣಿದಾರರು ಎಂದಿಗೂ ಸಹಾ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವ ಜಮೀನುಗಳಲ್ಲಿ ಇಂದಿಗೂ ಸಹಾ ನಾವು ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸಾಕ್ಷಿಯು ದಾವ ಐಟಂ.ನಂ.2 ರಲ್ಲಿ 20 ಗುಂಟೆ ಒತ್ತುವರಿಯಾಗಿದೆ ಎಂದು ನುಡಿಯುತ್ತಾರೆ. ದಾವ ಐಟಂ.ನಂ.1 ರಲ್ಲಿ ಯಾವುದೇ ಒತ್ತುವರಿಯಾಗಿಲ್ಲ.

ಅಣ್ಣೇಪೂಜಾರಿರವರ ಜಮೀನು ಸರ್ಕಾರಿ ಜಮೀನಾಗಿದ್ದು ಸದರಿ ಜಮೀನಲ್ಲಿ ನಾನಾಗಲೀ ನನ್ನ ಸಹೋದರನಾಗಲೀ ಕೃಷಿ ಮಾಡಬಾರದು ಎಂದು ತೀರ್ಪು ಋಣಿದಾರರು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಈ ವಿಚಾರದ ಸಿಟ್ಟಿನಿಂದ ನಾನು ತೀರ್ಪು ಋಣಿದಾರರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣ ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಸಲ್ಲಿಸಲಾಗಿರಮ ಅರ್ಜಿ ಮತ್ತು ಸಾಕ್ಷ್ಯಪ್ರಮಾಣಪತ್ರದಲ್ಲಿನ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.